ಓ:ಎಸ್:ನಂ.346/2015

ಪಿ.ಡಬ್ಲ್ಯೂ- 1

**ದಿಃ 14-01-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿ ಪರ ಶ್ರೀ ಡಿಸಿಎಸ್ ವಕೀಲರಿಂದ**

ದಾವ ಸ್ವತ್ತಿನ ಅಸಸ್ ಮೆಂಟ್ ಸಂಖ್ಯೆ ನನಗೆ ಗೊತ್ತಿಲ್ಲ. ಅಸಸ್ ಮೆಂಟ್ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ಹಕ್ಕುಪತ್ರ ನೀಡಿದ್ದು, ಕಂದಾಯ ಕಟ್ಟಿರುತ್ತೇವೆ. ನಾನು ಖಾತೆ ಮಾಡಲು ಅರ್ಜಿ ಸಲ್ಲಿಸಿದ್ದು, ಆದರೆ ಖಾತೆ ನನ್ನ ಹೆಸರಿಗೆ ಮಾಡಿರುವುದಿಲ್ಲ. ಹಕ್ಕುಪತ್ರ ನೀಡುವಾಗ ಪಂಚಾಯಿತಿ ಕೇಳಿದ ದಾಖಲೆಗಳನ್ನು ನಾವು ನೀಡಿಲ್ಲವಾದ್ದರಿಂದ ನಮಗೆ ಖಾತೆ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ದಾವ ಸ್ವತ್ತಿನಲ್ಲಿ ವಾಸ ಮಾಡಲು ಪಂಚಾಯಿತಿ ಪರವಾನಗಿ ಪಡೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವು ಹಕ್ಕು ಪತ್ರ ನೀಡಿದಾಗಿನಿಂದಲೂ ಅಲ್ಲೇ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಮೂರು ಜನ ಮಕ್ಕಳಿರುತ್ತೇವೆ. ನಾನು, ಜಗನ್ನಾಥ, ಸಂತೋಷ ಆಗಿರುತ್ತೇವೆ. ಸಾಕ್ಷಿಗೆ ಮೂರು ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ಕಾಣುವ ಟ್ರಾಕ್ಟರ್, ಬೈಕು, ಮನೆ ಮತ್ತು ಶೆಡ್ಡು ನಮಗೆ ಸಂಬಂಧಿಸಿದ್ದು ಎಂದು ನೋಡಿ ಒಪ್ಪಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ-1 ರಿಂದ ನಿಡಿ-4 ಎಂದು ಗುರುತಿಸಲಾಯಿತು. ನಮಗೆ ಜಮೀನು ಇದ್ದು, ಆದರೆ ಎಷ್ಟು ಇದೆ ಎಂದು ನನಗೆ ಮಾಹಿತಿ ಇಲ್ಲ.

ಸಾಮಾನ್ಯವಾಗಿ ಸರ್ಕಾರದಿಂದ ನಿವೇಶನಗಳನ್ನು ನಿವೇಶನರಹಿತರಿಗೆ ನೀಡುತ್ತಾರೆಂದರೆ ಸರಿ. 2 ರಿಂದ 4ನೇ ಪ್ರತಿವಾದಿಗಳು ನಮ್ಮ ಊರಿನವರೇ ಆಗಿರುತ್ತಾರೆ. ಅವರಿಗೂ ಸಹ ಮನೆ ಮತ್ತು ತೋಟ ಇದೆ ಎಂದರೆ ನನಗೆ ಗೊತ್ತಿಲ್ಲ. 3 ಮತ್ತು 4ನೇ ಪ್ರತಿವಾದಿಗೂ ಸಹ ನಿವೇಶನಗಳು ಹಂಚಿಕೆಯಾಗಿವೆ ಎಂದರೆ ನನಗೆ ಗೊತ್ತಿಲ್ಲ. ಒಟ್ಟು 49 ಜನರಿಗೆ ನಿವೇಶನಗಳನ್ನು ಹಂಚಿದ್ದು, ಎಲ್ಲರೂ ನನಗೆ ಪರಿಚಯವಿಲ್ಲ. ದಾವ ಸ್ವತ್ತು ಇರುವ ಜಮೀನಿನ ಒಟ್ಟು ವಿಸ್ತೀರ್ಣ ಸುಮಾರು 48 ಎಕರೆ ಇರಬಹುದು. ಸದರಿ ಸ್ವತ್ತಿನಲ್ಲಿ ಊರಿನ ಎಲ್ಲಾ ದನ ಮತ್ತು ಕುರಿಗಳನ್ನು ಮೇಯಿಸುತ್ತಾರೆಂದರೆ ಕೆಲವು ಜನ ಮಾತ್ರ ಮೇಯಿಸುತ್ತಾರೆಂದು ನುಡಿಯುತ್ತಾರೆ. ದಾವ ಸ್ವತ್ತು ಇರುವ ಜಮೀನು ಗೋಮಾಳವಾಗಿದ್ದು, ಅದನ್ನು ಬಿಟ್ಟು ಊರಿಗೆ ಬೇರೆ ಗೋಮಾಳ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ಜಮೀನಿನಲ್ಲಿ ದನ ಮೆಯಲು ಹುಲ್ಲು ಬೆಳೆದಿದೆ ಎಂದರೆ ಸಾಕ್ಷಿಯು ಊರಿನ ಕೆಲ ಜನ ಒತ್ತುವರಿ ಮಾಡಿ ಮಣ್ಣನ್ನು ತೆಗೆದುಕೊಂಡಿದ್ದಾರೆಂದು ನುಡಿಯುತ್ತಾರೆ. ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ

ಗೋಮಾಳದಲ್ಲಿ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ನಿರ್ಬಂಧಕಾಜ್ಞೆ ಆದೇಶವಾದ ಮೇಲೆ ನಾವು ದಾವ ಸ್ವತ್ತಿನಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸಾಕ್ಷಿಯು *1995-96* ರಿಂದಲೂ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ನಾನು *1995-96* ರಿಂದ ವಾಸವಾಗಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಅಕ್ಕಪಕ್ಕ ರಸ್ತೆ, ಚರಂಡಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವ ಸ್ವತ್ತು ಇರುವ ಜಮೀನಿನಲ್ಲಿ ಯಾರು ಗುಂಡಿ ತೆಗೆಯುತ್ತಿಲ್ಲ ಎಂದರೆ ಸಾಕ್ಷಿಯು ಇತ್ತೀಚೆಗೆ ನಿಲ್ಲಿಸಿದ್ದಾರೆಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಕಾರಣಕ್ಕೆ ರಾತ್ರೋರಾತ್ರಿ ನಾನು ಬುನಾದಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಗುಡಿಸಲನ್ನು ತೆಗೆದು ಪಾಯ ಹಾಕುವಾಗ ಊರಿನ ಕೆಲವರು ತಕರಾರು ಮಾಡಿರುತ್ತಾರೆ. ಆದರೆ ಜಗಳ ಮಾಡಿರುವುದಿಲ್ಲ. ದಾವ ಸ್ವತ್ತಿನ ಹಕ್ಕುಪತ್ರ ನೀಡಿದ ನಂತರ ಪಂಚಾಯಿತಿ ಪಕ್ಕದಲ್ಲಿರುವ ನಿವೇಶನವನ್ನು ನಾವು ಪಂಚಾಯಿತಿಯಿಂದ ಖರೀದಿಸಿರುತ್ತೇವೆ.

ಸದರಿ ನಿವೇಶನಕ್ಕೆ ನಮ್ಮಿಂದ ಹಣ ಪಾವತಿ ಮಾಡಿಸಿಕೊಂಡು ಅಳತೆ ಮಾಡಿ ಅಸಸ್ ಮೆಂಟ್ ದಾಖಲೆಯನ್ನು ನೀಡಿರುತ್ತಾರೆ. ಮಂಜೂರಿದಾರರು ಆದಾಯ ಪ್ರಮಾಣ ಪತ್ರ ನೀಡಿಲ್ಲವಾದ್ದರಿಂದ ಅವರ ನಿವೇಶನಗಳ ಮಂಜೂರಿಯನ್ನು ರದ್ದುಪಡಿಸಲಾಯಿತು ಎಂದರೆ ಸರಿಯಲ್ಲ. ದಾವ ಸ್ವತ್ತಿನ ಗೋಮಾಳದಲ್ಲಿ ನಾವು ಒಬ್ಬರೇ ಬುನಾದಿಯನ್ನು ಹಾಕಿರುತ್ತೇವೆ ಎಂದರೆ ಸಾಕ್ಷಿಯು ಮಂಜೂರಿದಾರರು ಅವರ ಜಾಗದಲ್ಲಿ ಕಣ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಬುನಾದಿಯನ್ನು ಹಾಕಿಲ್ಲ. ಆದರೆ ಅನುಭವದಲ್ಲಿ ಇರುತ್ತಾರೆ. ಮಂಜೂರುದಾರರ ಪಟ್ಟಿಯಂತೆ ಮಂಜೂರಿದಾರರಿಗೆ ನಿವೇಶನಗಳ ಸ್ವಾಧೀನ ನೀಡಿಲ್ಲ ಎಂದರೆ ಸರಿಯಲ್ಲ. ನಿವೇಶನಗಳ ಮಂಜೂರಿ ರದ್ದಿಯಾತಿ ಬಗ್ಗೆ ಗ್ರಾಮ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ರೆಜುಲೂಷನ್ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಹಕ್ಕು ಪತ್ರ ನೀಡಿದಾಗ ಮಾಡಿರುವುದು ಗೊತ್ತಿಲ್ಲ, ಈಗ ಮಾಡಿರಬಹುದು. ಗ್ರಾಮಸ್ಥರು ದಾವ ಸ್ವತ್ತು ಇರುವ ಜಮೀನನ್ನು ಗೋಮಾಳವಾಗಿ ಉಳಿಸಿಕೊಳ್ಳಲು ತೀರ್ಮಾನಿಸಿದ್ದಾರೆಂದರೆ ಸರಿಯಲ್ಲ. ಕಂದಾಯ ರಸೀದಿಗಳು ನಾವು ಖರೀದಿಸಿದ ಮನೆಗೆ ಸಂಬಂಧಿಸಿದ ರಸೀದಿಗಳು ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**